# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ.1738/2018

| | |
|---|---|
| ಸಾಕ್ಷಿದಾರರ ಹೆಸರು : | ಗಣೇಂದ್ರ ಪ್ರತಾಪ್ ಸಿಂಗ್ |
| ತಂದೆಯ ಹೆಸರು : | ಸರ್ಜು ಪ್ರಸಾದ ಯಾದವ್ |
| ವಯಸ್ಸು : | 33 ವರ್ಷ |
| ಉದ್ಯೋಗ : | ಆಟೋಮೇಶನ್ ಟೆಸ್ಟ ಇಂಜಿನೀಯರ್ |
| ವಾಸ : | ಬಿ.ಟಿ.ಎಮ್, 2ನೇ ಹಂತ, ಬೆಂಗಳೂರು. |

**ದಿನಾಂಕ 04.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ ರವರಿಂದಃ**

1. ಚಾಸಾ-1 ರವರು ನನಗೆ ಗೊತ್ತಿರುತ್ತಾರೆ. ಚಾಸಾ-1 ರವರು ದೂರು ಕೊಟ್ಟಿರುವುದು ನನಗೆ ಗೊತ್ತಿರುತ್ತದೆ. ಸಾಕ್ಷಿಯು ನಿಪಿ-2 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು**. ಸದರಿ ಸಹಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಎರಡು ಮೊಬೈಲ್ ಫೋನ್ ಗಳನ್ನು ವಶಪಡಿಸಿಕೊಂಡ ಬಗ್ಗೆ ಪೊಲೀಸರು ಸದರಿ ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ನಿಪಿ-2 ರ ಮೇಲೆ ಸಹಿಯನ್ನು ಸುಮಾರು 2018 ರಲ್ಲಿ ಮಾಡಿರುತ್ತೇನೆ. ನಿಪಿ-2 ಕ್ಕೆ ನಾನು ಸಹಿ ಮಾಡುವ ಸಮಯದಲ್ಲಿ ಬೇರೆ ಯಾರು ಸಹಿ ಮಾಡಿರುವುದಿಲ್ಲ.

(ಈ ಹಂತದಲ್ಲಿ ಹಿ.ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಹಿ.ಸ.ಸ.ಅ ರವರಿಂದಃ**

2. ದಿನಾಂಕ 09/08/2018 ರಂದು ಎನ್,ಜಿ.ಆರ್. ಲೇಔಟ್ ಶ್ರೀಶಾ ಅಪಾರ್ಟಮೆಂಟ್ 1ನೇ ಮಹಡಿಯಲ್ಲಿರುವ ಫ್ಲಾಟ್ ನಂ.40 ರಲ್ಲಿ ರಾತ್ರಿ 07.45 ರಿಂದ

08.30 ಗಂಟೆಯವರೆಗೆ ಪೊಲೀಸರು ಪಂಚನಾಮೆಗೆ ಬಂದಿದ್ದಾಗ ಘಟನಾ ಸ್ಥಳವನ್ನು ಚಾಸಾ-1 ರವರು ತೋರಿಸಿದ್ದು, ಪೊಲೀಸರು ಸ್ಥಳದಲ್ಲಿ ಪಂಚನಾಮೆ ತಯಾರಿಸಿದ್ದು, ಅದಕ್ಕೆ ನಾನು ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-2 ರಂತೆ ಪೊಲೀಸರು ಸ್ಥಳ ಪಂಚನಾಮೆ ಮಾಡಿದ್ದರು ಸಹ, ನಾನು ಸ್ಥಳದಲ್ಲಿಯೇ ಪಂಚನಾಮೆಗೆ ಸಹಿ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ 3ನೇ ಆರೋಪಿ ಹಾಜರಿಲ್ಲ, ವಕೀಲರು ವಿನಾಯಿತಿ ಅರ್ಜಿಸಲ್ಲಿಸಿರುತ್ತಾರೆ. ಆದರೆ ಸಾಕ್ಷಿಯ ವಿಚಾರಣಾ ಸಮಯದಲ್ಲಿ ವಕೀಲರು ಹಾಜರಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು. ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.